ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್

ನಾರಾಯಣಸ್ವಾಮಿ -ವಿರುದ್ಧ-ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಮತ್ತು ಇತರರು

ರಿಟ್ ಅಪೀಲುಸಂಖ್ಯೆ: 3855/2019 (ಎಸ್ಸಿ-ಎಸ್ಟಿ),ದಿನಾಂಕ: 6 ನೇ ನವೆಂಬರ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್:

ರಿಟ್ ಅರ್ಜಿಸಂಖ್ಯೆ: 31117/2009 ರಲ್ಲಿ ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಹೊರಡಿಸಿದ 14 ನೇ ಆಗಸ್ಟ್, 2019 ರ ಪ್ರಶ್ನಿತ ತೀರ್ಪು ಮತ್ತು ಆದೇಶಕ್ಕೆ ಈ ಅಪೀಲು ಆಕ್ಷೇಪಣೆ ಎತ್ತುತ್ತದೆ.ಆ ಮೂಲಕ, ಅಪೀಲುದಾರ ಹಾಗೂ ಆರನೇ ಎದುರುದಾರರು ಸಲ್ಲಿಸಿದ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.

2. ಅಪೀಲುದಾರ ಮತ್ತು ಆರನೇ ಎದುರುದಾರನು ಮೂಲ ಅನುದಾನ ಪಡೆದವರ ಕಾನೂನು ಪ್ರತಿನಿಧಿಗಳು ಎಂದು ಹೇಳಿಕೊಳ್ಳುತ್ತಾ, ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಹೋಬಳಿಯ ಹೊಸಹಳ್ಳಿ ಗ್ರಾಮದಲ್ಲಿ ಇರುವ 4 ಎಕರೆ 9 ಗುಂಟೆ ಅಳತೆಯ ಸರ್ವೆಸಂಖ್ಯೆ: 151 ನ್ನು ಹೊಂದಿರುವ ಜಮೀನಿನ (ಇದರಲ್ಲಿ ಇನ್ನು ಮುಂದೆ ' ಅನುಸೂಚಿತ ಸ್ವತ್ತು ' ಎಂದು ಉಲ್ಲೇಖಿಸಲಾಗುತ್ತದೆ. )ಮರು ಸ್ವಾಧೀನಕ್ಕಾಗಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ವರ್ಗಾವಣೆ ನಿಷೇಧ) ಅಧಿನಿಯಮ, 1978 ರ (ಸಂಕ್ಷಿಪ್ತವಾಗಿ ' ಪಿಟಿಸಿಎಲ್ ' ಅಧಿನಿಯಮ) 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದ್ದು, ಅನುದಾನವನ್ನು ಪಡೆದವನು ಎಂದಿಗೂ ಜಮೀನನ್ನು ಪರಭಾರೆ ಮಾಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು, 24 ನೇ ಸೆಪ್ಟೆಂಬರ್, 1949 ರಂದು ಎಸ್ಸಿ/ಎಸ್ಟಿ ಸಮುದಾಯಕ್ಕೆ ಸೇರಿದ ತಿಮ್ಮಪ್ಪ @ ತಿಮ್ಮಯ್ಯ ಎಂಬುವವರಿಗೆ ಅನುಸೂಚಿತ ಸ್ವತ್ತನ್ನು ನೀಡಲಾಗಿತ್ತು ಎಂಬುದು ಅವರ ನಿರ್ದಿಷ್ಟ ವಾದವಾಗಿತ್ತು.ಈ ಅನುದಾನಿತನು 1966 ರ ಮಾರ್ಚ್ 29 ಹಾಗೂ 1972 ರ ಜನವರಿ 12 ನೇ ದಿನಾಂಕದ ಕ್ರಯಪತ್ರಗಳ ಪ್ರಕಾರ ಅನುಸೂಚಿತ ಸ್ವತ್ತನ್ನು ಮಾರಾಟ ಮಾಡಿದನೆಂದು ಸಹ ವಾದಿಸಲಾಗಿದೆ.ತರುವಾಯ, ಆ ಅನುಸೂಚಿತ ಸ್ವತ್ತನ್ನು 2005 ರ ವರ್ಷದಲ್ಲಿ ಮೂರರಿಂದ ಐದನೇ ಎದುರುದಾರರಿಗೆ ಮಾರಾಟ ಮಾಡಲಾಯಿತು.

3. ಮುಂದುವರೆಸುತ್ತಾ, ಅಪೀಲುದಾರರು, 2007 ರ ವರ್ಷದಲ್ಲಿ ಅಪೀಲುದಾರ ಮತ್ತು ಆರನೇ ಎದುರುದಾರರು ಪಿಟಿಸಿಎಲ್ ಅಧಿನಿಯಮದ 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರ ಮುಂದೆ ವ್ಯವಹರಣೆಗಳನ್ನು ಪ್ರಾರಂಭಿಸಿದುದಾಗಿ, ಸದರಿ ಅರ್ಜಿಯನ್ನು ಅಸಿಸ್ಟೆಂಟ್ ಕಮಿಷನರ್ ತಿರಸ್ಕರಿಸಿದ್ದರಿಂದ, ಅಪೀಲುದಾರ ಮತ್ತು ಆರನೇ ಎದುರುದಾರರು ಡೆಪ್ಯೂಟಿ ಕಮೀಷನರ್‌ರವರ ಮುಂದೆ ಅಪೀಲು ಸಲ್ಲಿಸಿದ್ದು, ಅದನ್ನು 16 ನೇ ಜೂನ್ 9, 2014 ರಂದು ಮೆಮೊ ಸಲ್ಲಿಸುವ ಮೂಲಕ ಹಿಂಪಡೆಯಲಾಯಿತು ಎಂದು ವಾದಿಸಿದ್ದಾರೆ.ಆ ತರುವಾಯ, ಅಪೀಲುದಾರ ಮತ್ತು ಆರನೇ ಎದುರುದಾರರು ಪಿಟಿಸಿಎಲ್ ಅಧಿನಿಯಮದ ಉಪಬಂಧಗಳ ಉಲ್ಲಂಘನೆಯಾದ್ದರಿಂದ, ಕ್ರಯಪತ್ರಗಳನ್ನು ರದ್ದುಗೊಳಿಸುವಂತೆ ಕೋರಿ ಅನುಸೂಚಿತ ಸ್ವತ್ತಿನ ಮರು ಸ್ವಾಧೀನಕ್ಕಾಗಿ ಅಸಿಸ್ಟೆಂಟ್ ಕಮೀಷನರ್‌ರವರ ಮುಂದೆ 2015 ರ ವರ್ಷದಲ್ಲಿ ಮತ್ತೊಮ್ಮೆ ವ್ಯವಹರಣೆಗಳನ್ನು ಪ್ರಾರಂಭಿಸಿದರು.ಅಸಿಸ್ಟೆಂಟ್ ಕಮಿಷನರ್ ರವರು ಸದರಿ ಅರ್ಜಿಯನ್ನು 28 ನೇ ಸೆಪ್ಟೆಂಬರ್, 2015 ರ ಆದೇಶದ ಪ್ರಕಾರ ಪುರಸ್ಕರಿಸಿದ್ದು, ಇದರಲ್ಲಿನ ಮೂರರಿಂದ ಐದರವರೆಗಿನ ಎದುರುದಾರರು ಡೆಪ್ಯೂಟಿ ಕಮಿಷನರ್‌ರವರ ಮುಂದೆ ಅಪೀಲು ಹೂಡಿದ್ದು, ಅವರು 14 ನೇ ನವೆಂಬರ್, 2018 ರ ಆದೇಶದ ಪ್ರಕಾರ ಅದನ್ನು ಪುರಸ್ಕರಿಸಿದರು.ಡೆಪ್ಯುಟಿ ಕಮಿಷನರ್‌ರವರು ಹೊರಡಿಸಿದ ಸದರಿ ಆದೇಶವನ್ನು

ಮಾನ್ಯ ಏಕ ಸದಸ್ಯ ನ್ಯಾಯಾಧೀಶರ ಮುಂದೆ ಇದರಲ್ಲಿನ ಅಪೀಲುದಾರರು ಹಾಗೂ ಆರನೇ ಎದುರುದಾರರು ಆಕ್ಷೇಪಿಸಿದ್ದರು ಎಂದು ಅಪೀಲುದಾರರು ವಾದಿಸಿದ್ದಾರೆ.

4. ಮಾನ್ಯ ಏಕ ಸದಸ್ಯ ನ್ಯಾಯಾಧೀಶರು 14 ನೇ ಆಗಸ್ಟ್, 2019 ರ ಪ್ರಶ್ನಿತ ತೀರ್ಪು ಮತ್ತು ಆದೇಶದ ಮೂಲಕ ನಿಕ್ಕಂಟಿ ರಾಮ ಲಕ್ಷ್ಮಿ ಇತ -ವಿರುದ್ಧ-ಕರ್ನಾಟಕ ರಾಜ್ಯ ' ಮತ್ತು ವಿವೇಕ್ ಎಂ. ಹಿಂದೂಜಾ ಮತ್ತು ಇತರರು -ವಿರುದ್ಧ ಎಂ. ಅಶ್ವಥ್ ಮತ್ತು ಇತರರು ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಅವಲಂಬಿಸಿದ, ರಿಟ್ ಅರ್ಜಿಯನ್ನು ವಜಾಗೊಳಿಸಿದ್ದಾರೆ.

5. ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ನೀಡಿದ ತೀರ್ಪು ಮತ್ತು ಆದೇಶದಿಂದ ಬಾಧಿತರಾಗಿ, ಅಪೀಲುದಾರರು ಈ ಅಪೀಲನ್ನು ಹೂಡಿದ್ದಾರೆ.

6. ಪಿಟಿಸಿಎಲ್ ಅಧಿನಿಯಮವು ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ, ಅದರಲ್ಲೂ ನಿರ್ದಿಷ್ಟವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳಿಗೆ ಸೇರಿದ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸುಧಾರಿಸುವ ಉದ್ದೇಶದಿಂದ ಅಧಿನಿಯಮಿಸಲಾದ, ಸಮಾಜಕ್ಕೆ ಪ್ರಯೋಜನಕಾರಿಯಾದ ಶಾಸನವಾಗಿದ್ದು, ವ್ಯವಹರಣೆಗಳನ್ನು ಪ್ರಾರಂಭಿಸುವಲ್ಲಿನ ವಿಳಂಬವೊಂದೇ ವ್ಯವಹರಣೆಗಳಿಗೆ ಮಾರಕವಾಗುವುದಿಲ್ಲ ಮತ್ತು ಅಪೀಲುದಾರನ ಕ್ಷೇಮನ್ನು ಇದೊಂದೇ ಕಾರಣದ ಮೇಲೆ ತಿರಸ್ಕರಿಸಲಾಗುವುದಿಲ್ಲ ಎಂದು ಅದರ ಗುಣಾವಗುಣಗಳನ್ನು ವಿವೇಚಿಸಲು ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ವಿಫಲರಾಗಿದ್ದಾರೆ ಎನ್ನುವಷ್ಟರಮಟ್ಟಿಗೆ, ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಜಾರಿಗೊಳಿಸಿದ ಆದೇಶವು ತಪ್ಪಾಗಿದೆ ಎಂದು ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು ನಿವೇದಿಸಿದ್ದಾರೆ.ಪಿಟಿಸಿಎಲ್ ಅಧಿನಿಯಮದ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಲು ಯಾವುದೇ ಕಾಲಪರಿಮಿತಿಯ ಅವಧಿಯನ್ನು ನಿಗದಿಗೊಳಿಸಿಲ್ಲ ಮತ್ತು ಅದರಂತೆ, ಮಾನ್ಯ ಏಕ ಸದಸ್ಯ ನ್ಯಾಯಾಧೀಶರು, 2015 ರಲ್ಲಿ ಪ್ರಾರಂಭಿಸಿದ ವ್ಯವಹರಣೆಗಳನ್ನು ವಿಳಂಬ ಮತ್ತು ದೋಷಗಳ ಕಾರಣದ ಮೇಲೆ ವಜಾಗೊಳಿಸಲು ತಕ್ಕುವಾಗಿವೆ

1. 2017 ಎಸ್ಸಿಸಿ ಆನ್ಲೈನ್ ಎಸ್ಸಿ 1862

2. 2017 ಎಸ್ಸಿಸಿ ಆನ್ಲೈನ್ ಎಸ್ಸಿ 1858

ಮತ್ತು ಅವುಗಳನ್ನು ಸಮಂಜಸವಾದ ಸಮಯದೊಳಗೆ ಪ್ರಾರಂಭಿಸಲಿಲ್ಲ ಎಂಬ ತೀರ್ಮಾನಕ್ಕೆ ಬರುವಲ್ಲಿ ತಪ್ಪೆಸಗಿದ್ದಾರೆ.

7. ಇದಕ್ಕೆ ತದ್ವಿರುದ್ಧವಾಗಿ, ಮೂರರಿಂದ ಐದನೇ ಎದುರುದಾರರವರೆಗಿನ ವ್ಯಕ್ತಿಗಳ ಪರವಾಗಿ ಹಾಜರಾದ ಮಾನ್ಯ ವಕೀಲರು ಪ್ರಶ್ನಿತ ಆದೇಶವನ್ನು ಸಮರ್ಥಿಸಿದರು.

8. ಅಪೀಲುದಾರರ ಪರವಾಗಿ ಮಂಡಿಸಿದ ವಾದಗಳನ್ನು ನಾವು ಕಾಳಜಿಯಿಂದ ಪರಿಗಣಿಸಿರುತ್ತೇವೆ ಮತ್ತು ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ್ದೇವೆ.

9. 24 ನೇ ಸೆಪ್ಟೆಂಬರ್, 1941 ರಷ್ಟು ಹಿಂದೆ ಇದ್ದಂತೆ, ಬಹು ಹಿಂದೆಯೇ ಅನುಸೂಚಿತ ಸ್ವತ್ತನ್ನು ಮೂಲ ಅನುದಾನಿತನ ಪರವಾಗಿ ನೀಡಲಾಯಿತು ಮತ್ತು ಅನುದಾನಿತನು 29 ನೇ ಮಾರ್ಚ್, 1966 ರ ಹಾಗೂ 1972 ರ ಜನವರಿ 12 ನೇ ಜನವರಿ, 1972 ರ ಆ ಎರಡು ಕ್ರಯಪತ್ರಗಳ ಮೇರೆಗೆ ಅದನ್ನು ಪರಭಾರೆ ಮಾಡಿದ್ದರು ಎಂಬ ಸಂಗತಿ ನಿರ್ವಿವಾದವಾಗಿದೆ.ಅಪೀಲುದಾರ ಮತ್ತು ಆರನೇ ಎದುರುದಾರರು ಆರಂಭದಲ್ಲಿ 2007 ರ ವರ್ಷದಲ್ಲಿ ಪಿಟಿಸಿಎಲ್ ಅಧಿನಿಯಮದ 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದ್ದರು.2014 ರ ವರ್ಷದಲ್ಲಿ ಅದನ್ನು ಅವರು ಹಿಂತೆಗೆದುಕೊಂಡರು ಮತ್ತು ಆ ನಂತರ, 2015 ರ ವರ್ಷದಲ್ಲಿ ಅವರು ವ್ಯವಹರಣೆಗಳನ್ನು ಮತ್ತೊಮ್ಮೆ ಪ್ರಾರಂಭಿಸಿದ್ದರು.ಅವು ಈಗಿನ ಅಪೀಲಿನ ವಸ್ತು ವಿಷಯವಾಗಿವೆ ಎಂಬುದು ಸಹ ನಿರ್ವಿವಾದ.

10. ಈ ಸನ್ನಿವೇಶದಲ್ಲಿ, ಅಧಿಕಾರಿಗಳ ಹಾಗೂ ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ವ್ಯವಹರಿಸಿಲ್ಲದಿರುವ ವಿಷಯದ ಒಂದು ಅಂಶವನ್ನು ಪ್ರಸ್ತಾಪಿಸುವುದು ಸೂಕ್ತವಾಗಿದೆ, ಆದರೆ, ಪ್ರಸ್ತುತ ವ್ಯವಹರಣೆಗಳ ಸಮರ್ಥನೀಯತೆಯನ್ನು ನಿರ್ಧರಿಸುವ ಉದ್ದೇಶದಿಂದ ಇದು ಪ್ರಸ್ತುತವಾಗಬಹುದು.ಮೇಲೆ ಹೇಳಿದಂತೆ,

ಪಿಟಿಸಿಎಲ್ ಅಧಿನಿಯಮದ 4 ನೇ ಮತ್ತು 5 ನೇ ಪ್ರಕರಣದ ಅಡಿಯಲ್ಲಿನ ವ್ಯವಹರಣೆಗಳನ್ನು 2007 ರ ವರ್ಷದಲ್ಲಿ ಮೂಲತಃ ಅಪೀಲುದಾರರು ಮತ್ತು 6 ನೇ ಎದುರುದಾರರು ಪ್ರಾರಂಭಿಸಿದ್ದು, ಅದನ್ನು ಅಸಿಸ್ಟೆಂಟ್ ಕಮಿಷನರ್‌ರವರು ವಜಾಗೊಳಿಸಿದ್ದರು.ಡೆಪ್ಯುಟಿ ಕಮಿಷನರ್‌ರವರ ಮುಂದೆ ಸಲ್ಲಿಸಿದ ಅಪೀಲನ್ನುದಿನಾಂಕ: 16 ನೇ ಜೂನ್, 2014 ರ (ರಿಟ್ ಅರ್ಜಿಗೆ ಅನುಬಂಧ-ಇ) ಮೆಮೊಗೆ ಅನುಸಾರವಾಗಿ ಹಿಂಪಡೆಯಲಾಗಿದೆ ಎಂದು ವಜಾಗೊಳಿಸಲಾಯಿತು.ಅದರ ಅಡಿಯಲ್ಲಿ ಅಪೀಲುದಾರರು ಮತ್ತು ಆರನೇ ಎದುರುದಾರರು ಬೇಷರತ್ತಾಗಿ ಅಪೀಲನ್ನು ಹಿಂಪಡೆದರು.ಈ ಸಂದರ್ಭಗಳ ಅಡಿಯಲ್ಲಿ, ಅಪೀಲನ್ನು ಹಾಗೂ ಅವರಿಂದ ಈ ಮೊದಲು ಕೈಗೊಳ್ಳಲಾಗಿದ್ದ ವ್ಯವಹರಣೆಗಳನ್ನು ಬೇಷರತ್ತಾಗಿ ಹಿಂಪಡೆದಿದ್ದು, ಅಪೀಲುದಾರರು ಮತ್ತು ಆರನೇ ಎದುರುದಾರರು ಅದೇ ಸಂಗತಿಗಳ ಮೇಲೆ ಹಾಗೂ ಅದೇ ವಸ್ತು ವಿಷಯಕ್ಕೆ ಎಂದರೆ, ಅನುಸೂಚಿತ ಸ್ವತ್ತಿಗೆ, ಸಂಬಂಧಿಸಿದಂತೆ ಅದೇ ವ್ಯಾಜ್ಯ ಕಾರಣದ ಮೇಲೆ ಪಿಟಿಸಿಎಲ್ ಅಧಿನಿಯಮದ 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಎರಡನೇ ಬಾರಿಗೆ ಮತ್ತೊಮ್ಮೆ ಹೊಸ ವ್ಯವಹರಣೆಗಳನ್ನು ಪ್ರಾರಂಭಿಸಲಾಗಿರಲಿಲ್ಲ.

11. ಈ ಮೇಲಿನ ವಿವಾದಾತ್ಮಕವಲ್ಲದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು, ಪಿಟಿಸಿಎಲ್ ಅಧಿನಿಯಮದ 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿನ ವ್ಯವಹರಣೆಗಳನ್ನು ಒಮ್ಮೆ ಸಲ್ಲಿಸಲಾಗಿದೆ/ಪ್ರಾರಂಭಿಸಲಾಗಿದೆ.ಅವುಗಳ ಗುಣಾವಗುಣಗಳ ಆಧಾರದ ಮೇಲೆ ಅವುಗಳನ್ನು ಹಿಂಪಡೆಯಲಾಗಿದೆ ಅಥವಾ ವಜಾಗೊಳಿಸಲಾಗಿದೆ. ಅದೇ ವ್ಯಾಜ್ಯಕಾರಣದ ಮೇಲೆ ಮತ್ತು ಅದೇ ವಸ್ತುವಿಷಯದ ಮೇಲೆ ಹೊಸ ಅರ್ಜಿ/ಎರಡನೇ ಅರ್ಜಿ ಸಮರ್ಥನೀಯವಲ್ಲ ಹಾಗೂ ಇದೊಂದೇ ಕಾರಣದ ಮೇಲೆ ಅದು ವಜಾಗೊಳಿಸಲು ತಕ್ಕದ್ದಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಎರಡನೇ ಅರ್ಜಿಯನ್ನು ಎಸ್ಟೊಪೆಲ್ (ಸ್ವಾರ್ಜಿತ ಅಡ್ಡಿ), ಮೌನ ಸಮ್ಮತಿ, ತ್ಯಜಿಸುವಿಕೆ ಮತ್ತು ಮನ್ನಾ ತತ್ವಗಳಿಂದ ಸ್ಪಷ್ಟವಾಗಿ ನಿರ್ಬಂಧಿಸಲಾಗಿದೆ. ಅಂತೆಯೇ, ಈ ವಿಷಯದಲ್ಲಿ ಮಾನ್ಯ ಏಕಸದಸ್ಯ ನ್ಯಾಯಾಧೀಶರಾಗಲೀ ಅಥವಾ ಅಧಿಕಾರಿಗಳಾಗಲೀ ನಿರ್ಣಯವನ್ನು ದಾಖಲಿಸಲಿಲ್ಲವಾದರೂ, ದಾಖಲೆಯಲ್ಲಿನ ವಿವಾದಾತ್ಮಕವಲ್ಲದ ಸಾಕ್ಷ್ಯಾಧಾರಗಳನ್ನು ಗಮನದಲ್ಲಿಟ್ಟುಕೊಂಡು, ಪಿಟಿಸಿಎಲ್ ಅಧಿನಿಯಮದ 4 ಮತ್ತು 5 ನೇ ಪ್ರಕರಣಗಳ ಅಡಿಯಲ್ಲಿ ಎರಡನೇ ಅರ್ಜಿಯು ಸಮರ್ಥನೀಯವಾಗುವುದಿಲ್ಲ ಮತ್ತು ಈ ಒಂದೇ ಕಾರಣದ ಮೇಲೆ ಅದು ತಿರಸ್ಕೃತವಾಗಲು ತಕ್ಕುದ್ದಾಗಿದೆ.

12. 2015 ರ ವರ್ಷದಲ್ಲಿ ಅಪೀಲುದಾರನು ಆರನೇ ಎದುರುದಾರರೊಂದಿಗೆ ಪ್ರಾರಂಭಿಸಿದ ವ್ಯವಹರಣೆಯು ಸಮರ್ಥನೀಯವಾಗಿದೆ ಮತ್ತು ವಿಳಂಬ ಹಾಗೂ ಪ್ರತಿಬಂಧಗಳಿಂದ ನಿರ್ಬಂಧಿಸಲಾಗುವುದಿಲ್ಲ ಎಂದು ಅಪೀಲುದಾರನ ಪರವಾಗಿ ವಾದಿಸಿರುವಷ್ಟರಮಟ್ಟಿಗೆ, ಈ ಪ್ರಶ್ನೆಯು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಘೋಷಣೆಗಳ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಅನುಸರಿಸಿ, ಚ ಈ ನ್ಯಾಯಾಲಯದ ತರುವಾಯದ ತೀರ್ಪುಗಳ ಬೆಳಕಿನಲ್ಲಿ ಅದು ಪೂರ್ವ ನಿದರ್ಶನರಹಿತ ವಿಷಯವಾಗಬೇಕಿಲ್ಲ.

13. ಯಾವುದೇ ಶಾಸನಬದ್ಧ ಉಪಬಂಧಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ವ್ಯವಹರಣೆಗಳನ್ನು ಕೈಗೊಳ್ಳಲು ಯಾವುದೇ ಕಾಲ ಪರಿಮಿತಿಯನ್ನು ನಿಗದಿಪಡಿಸಿರದಿದ್ದರೂ ಸಹ, ಸದರಿ ವ್ಯವಹರಣೆಗಳನ್ನು ಸಮಂಜಸವಾದ ಸಮಯದೊಳಗೆ ಪ್ರಾರಂಭಿಸಬೇಕಾಗುತ್ತದೆ ಮತ್ತು ದೀರ್ಘ ಸಮಯದ ವಿಳಂಬದ ನಂತರ ಮತ್ತು ಸಕಾರಣವಾದ ಅನುಮತಿಯನ್ನು ಮೀರಿ, ಪ್ರಾರಂಭಿಸಲಾದ ವ್ಯವಹರಣೆಗಳು ಯಾವುವಾದರೂ ಇದ್ದಲ್ಲಿ, ಅವುಗಳನ್ನು ನಿರ್ಬಂಧಗಳು ಮತ್ತು ಅತಿಯಾದ ವಿಳಂಬದಿಂದ ಸ್ಪಷ್ಟವಾಗಿ ನಿರ್ಬಂಧಿಸಲಾಗಿದೆ ಹಾಗೂ ಅದು ವಜಾಗೊಳಿಸಲು ತಕ್ಕುದ್ದಾಗಿದೆ ಎಂಬುದು ಈಗ ಸುಸ್ಥಾಪಿತವಾಗಿದೆ.

14. ಇಬ್ರಾಹಿಂ ಪಟ್ಟಂ ತಾಲ್ಲೂಕು ವ್ಯವಸಾಯ ಕೂಲಿ ಸಂಘಂ ವಿರುದ್ಧ ಕೆ. ಸುರೇಶ್ ರೆಡ್ಡಿ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಮಾನಿಸಿದೆ:

3. (2003) 7 ಎಸ್ಸಿಸಿ 667

9. ರಿಟ್ ಅಪೀಲುಗಳಲ್ಲಿ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆಯೂ ಸಹ ಅಪೀಲುದಾರರು ಅನಧಿಕೃತ ಎದುರುದಾರರ ವಂಚನೆಯ ಕೃತ್ಯಗಳ ಕಾರಣದಿಂದಾಗಿ 13-15 ವರ್ಷಗಳ ಸುದೀರ್ಘ ವಿಳಂಬದ ನಂತರವೂ ಸಹ, ಸ್ವಪ್ರೇರಿತವಾಗಿ ಅಧಿಕಾರವನ್ನು ಚಲಾಯಿಸಿರಬಹುದಾಗಿತ್ತು ಎಂದು ವಾದಿಸಲಿಲ್ಲ.ಆ ಉಪ ಪ್ರಕರಣದ ಭಾಷೆಗೆ ಕಟ್ಟುನಿಟ್ಟಾಗಿ ಅಂಟಿಕೊಂಡಿರುವ ಯಾವುದೇ ಸಮಯದಲ್ಲಿ ಸ್ವಪ್ರೇರಿತ ಅಧಿಕಾರವನ್ನು

ಚಲಾಯಿಸಬಹುದೇ ಅಥವಾ ಅದನ್ನು ಸಮಂಜಸವಾದ ಸಮಯದಲ್ಲಿ ಚಲಾಯಿಸಬಹುದೇ?ಎಂಬ ಬಗ್ಗೆ ಅಧಿನಿಯಮದ 50-ಬಿ ಪ್ರಕರಣದ ( 4) ನೇ ಉಪ ಪ್ರಕರಣದ ಭಾಷೆಯ ಮೇಲೆ ಮಾತ್ರ ವಿಭಾಗೀಯ ಪೀಠದ ಮುಂದೆ ಗಮನವನ್ನು ಕೇಂದ್ರೀಕರಿಸಲಾಗಿತ್ತು.ವಂಚನೆ ಮತ್ತು ವಂಚನೆಯು ಪತ್ತೆಯಾದ ದಿನಾಂಕ ಅಥವಾ ಸಮಯಕ್ಕೆ ಸಂಬಂಧಿಸಿದಂತೆ ವಾದಿಸಲಾದ ಅಗತ್ಯವಿರುವ ಸಾಕಷ್ಟು ವಿವರಗಳು ಇಲ್ಲದಿದ್ದಾಗ ಹಾಗೂ ಅದಕ್ಕಿಂತ ಹೆಚ್ಚಾಗಿ, ಸ್ವ-ಪ್ರೇರಣೆಯ ಅಧಿಕಾರವನ್ನು ವಂಚನೆಯು ಪತ್ತೆಯಾದ ದಿನಾಂಕದಿಂದ ಯುಕ್ತ ಸಮಯದೊಳಗೆ ಚಲಾಯಿಸಬಹುದು ಎಂಬ ವಾದವನ್ನು ಮಂಡಿಸಿರದಿದ್ದಾಗ, ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಮತ್ತು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು, ಅಧಿಕೃತವಲ್ಲದ ಎದುರುದಾರರು ಎಸಗಿದರೆಂದು ಹೇಳಲಾದ ವಂಚನೆಯ ಪ್ರಶ್ನೆಯನ್ನು ಪರಿಶೀಲಿಸದಿರುವುದು ಸರಿಯಾಗಿತ್ತು.ಅಧಿನಿಯಮದ 50-ಬಿ ಪ್ರಕರಣದ ( 4) ನೇ ಉಪ ಪ್ರಕರಣದಲ್ಲಿ ' ಯಾವುದೇ ಸಮಯದಲ್ಲಿ ' ಎಂಬ ಪದಗಳ ಬಳಕೆಯು ಅಥವಾ ಸಲಹಾತ್ಮಕವಾಗಿ ಮತ್ತು ಸಂದರ್ಭೋಚಿತವಾಗಿ ನಿರ್ದಿಷ್ಟ ದಿನಾಂಕದಿಂದ ಪ್ರಾರ ಂ ಭಿಸಿ, ಯಾವ ನಿರ್ದಿಷ್ಟ ಕಾಲ ಪರಿಮಿತಿಯೊಳಗೆ ಸ್ವಯಂ ಪ್ರೇರಿತ ಅಧಿಕಾರವನ್ನು

ಚಲಾಯಿಸಬಹುದು ಎಂಬುದು ನಿಗದಿಪಡಿಸಿಲ್ಲ.ಸ್ವಯಂ ಪ್ರೇರಿತ ಅಧಿಕಾರದ ಚಲಾವಣೆಯು ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸಂದರ್ಭಗಳನ್ನು ಅವಲಂಬಿಸಿರುತ್ತದೆ.ವಂಚನೆಯ ಪ್ರಕರಣಗಳಲ್ಲಿ ವಂಚನೆಯು ಪತ್ತೆಯಾದ ಅಥವಾ ವಂಚನೆ ಕಂಡು ಬಂದ ದಿನಾಂಕದಿಂದ ಯುಕ್ತವಾದ ಸಮಯದೊಳಗಾಗಿ ಅಧಿಕಾರವನ್ನು ಚಲಾಯಿಸಬಹುದು.ಅಂತಹ ಅಧಿಕಾರವನ್ನು ಚಲಾಯಿಸುವಾಗ, ಗಣನೀಯ ಸಮಯ ಕಳೆದ ಕಾರಣ, ಸ್ಥಿರಾಸ್ತಿಯ ಮೇಲೆ ಮೂರನೇ ಪಕ್ಷಕಾರರ ಹಕ್ಕುಗಳ ಮೇಲಾಗುವ ಪರಿಣಾಮ, ತರುವಾಯದ ಪ್ರಾಮಾಣಿಕ ವರ್ಗಾವಣೆಗಳ ಮೂಲಕ ಹಸ್ತಾಂತರ, ಇತರ ಅಧಿನಿಯಮಗಳ ಉಪಬಂಧಗಳ ಅಡಿಯಲ್ಲಿ ಅಂತಿಮತೆಯನ್ನು ಪಡೆಯುವ ಆದೇಶಗಳು ಮುಂತಾದಂತಹ ಭೂ ಪರಿಮಿತಿ (ಲ್ಯಾಂಡ್ ಸೀಲಿಂಗ್) ಅಧಿನಿಯಮದಂತಹ ಹಲವಾರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.ಹೀಗಾಗಿ, ಯಾವ ದಿನಾಂಕದಿಂದ ಕಾಲಪರಿಮಿತಿಯು ಪ್ರಾರಂಭವಾಗುತ್ತದೆ?ಮತ್ತು ಯಾವ ಅವಧಿಯೊಳಗಾಗಿ ಸ್ವ-ಪ್ರೇರಣೆಯಿಂದ ಅಧಿಕಾರವನ್ನು ಚಲಾಯಿಸಬೇಕು ಎಂಬುದನ್ನು ಹೇಳದೆ, ಅಧಿನಿಯಮದ 50-ಬಿ ಪ್ರಕರಣದ ( 4) ನೇ ಉಪ-ಪ್ರಕರಣದಲ್ಲಿ ಕಾನೂನಿನ ಸಂದರ್ಭದಲ್ಲಿ ಮತ್ತು ಪಕ್ಷಕಾರರ ಹಕ್ಕುಗಳ ಸ್ವರೂಪದಲ್ಲಿ, ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ವಂಚನೆಯು ಪತ್ತೆಯಾದ ದಿನಾಂಕದಿಂದ ಯುಕ್ತ ಅವಧಿಯೊಳಗೆ ಸ್ವಯಂಪ್ರೇರಿತ ಅಧಿಕಾರವನ್ನು ಚಲಾಯಿಸಬಹುದು ಎಂಬ ಅರ್ಥದಲ್ಲಿ ' ಯಾವುದೇ ಸಮಯದಲ್ಲಿ ' ಎಂಬ ಪದಗಳನ್ನು ಬಳಸಿರುವುದು ಕಂಡುಬರುತ್ತದೆ.ಅಧಿನಿಯಮದ 50-ಬಿ ಪ್ರಕರಣದ (4) ನೇ ಉಪ ಪ್ರಕರಣದಲ್ಲಿ ' ಯಾವುದೇ ಸಮಯದಲ್ಲಿ ' ಎಂಬ ಪದಗಳ ಬಳಕೆಯನ್ನು ಸೂತ್ರರೂಪವಾಗಿ, ಪದಶಃ ನೀಡುವ ಅರ್ಥದ ಮೂಲಕ ಓದಬಾರದು.ಅದನ್ನು ಸಂದರ್ಭೋಚಿತವಾಗಿ ಮತ್ತು ಸಮ ಂ ಜಸವಾಗಿ ಓದಿ ಅರ್ಥೈಸಿಕೊಳ್ಳಬೇಕು.ಯಾವುದೇ ಸಮಯದಲ್ಲಿ ಎಂಬ ಪದಗಳನ್ನು ಅವುಗಳಿಗೆ ನಿಘಂಟುವಿನಲ್ಲಿ ಇರುವ ಅರ್ಥಗಳ ಆಧಾರದ ಮೇಲೆ ಅರ್ಥೈಸಿಕೊಂಡು ಮುಂದುವರಿದರೆ, ಅಧಿನಿಯಮದ 50-ಬಿ ಪ್ರಕರಣದ (4) ನೇ ಉಪ-ಪ್ರಕರಣದ ಅಡಿಯಲ್ಲಿ ದಶಕಗಳ ನಂತರವೂ ಸಹ ಸ್ವ-ಪ್ರೇರಣೆಯಿಂದ ಅಧಿಕಾರವನ್ನು ಚಲಾಯಿಸಬಹುದು ಮತ್ತು ಆಗ ಅದು ಪಕ್ಷಕಾರರ ಹಕ್ಕುಗಳನ್ನು, ಅದರಲ್ಲೂ ಸ್ಥಿರಾಸ್ತಿಗಳ ಮೇಲಿನ ಹಕ್ಕುಗಳ ಮೇಲೆ ಗಂಭೀರವಾಗಿ ಪರಿಣಾಮ ವನ್ನುಂಟುಮಾಡಿ, ಅನಿಶ್ಚಿತತೆಗೆ ಮತ್ತು ತೊಡಕುಗಳಿಗೆ ಕಾರಣವಾಗಿ, ಅಸಂಗತ ಸ್ಥಿತಿಗೆ ಕಾರಣವಾಗುತ್ತದೆ.ಹೊರಡಿಸಿದ ಆದೇಶಗಳ ಹಿನ್ನೆಲೆಯಲ್ಲಿ ಪ್ರಾಪ್ತವಾದ ಪಕ್ಷಕಾರರ ಹಕ್ಕುಗಳ ಅಂತಿಮತೆಯನ್ನು ಮತ್ತು ನಿಶ್ಚಿತತೆಯನ್ನು ಪಡೆಯುವ ಆದೇಶಗಳು ಪವಿತ್ರತೆಯನ್ನು D ಹೊಂದಿರಬೇಕು.ಯಾವುದೇ ಸಮಯದಲ್ಲಿ ' ಸ್ವ-ಪ್ರೇರಣೆಯಿಂದ ಅಧಿಕಾರದ ಚಲಾವಣೆ ಎ0ದರೆ, ದಿನಗಳು, ತಿಂಗಳುಗಳು ಅಥವಾ ವರ್ಷಗಳು ಎಂಬುದಾಗಿ ಯಾವುದೇ ನಿರ್ದಿಷ್ಟ ಅವಧಿಯನ್ನು ನಿರ್ದಿಷ್ಟ ದಿನಾಂಕದಿಂದ ಎಣಿಕೆ ಮಾಡಿ ನಿಗದಿಪಡಿಸಿರುವುದಿಲ್ಲ.(ಎಸ್ಐಸಿ) ಆದರೆ, ಯಾವುದೇ ಸಮಯದಲ್ಲಿ ' ಎಂಬುದು ಅನಿಯಂತ್ರಿತ ಮತ್ತು ಇಚ್ಛಾನುಸಾರ ಎಂದರ್ಥ ಹೊಂದಿರುವುದಿಲ್ಲ.ಈ ದೃಷ್ಟಿಕೋನದಲ್ಲಿ, ' ಯಾವುದೇ ಸಮಯದಲ್ಲಿ ' ಎಂಬು ಬುದನ್ನು ನಿಗದಿಪಡಿಸಿದ ಕಾಲ ಪರಿಮಿತಿ ಇಲ್ಲದಿದ್ದಾಗ, ಪ್ರತಿಯೊಂದು ಪ್ರಕರಣದ ಸಂಗತಿಗಳ ಮತ್ತು ಸಂದರ್ಭಗಳನ್ನಾಧರಿಸಿ ಯುಕ್ತ ಕಾಲಾವಧಿಯೊಳಗೆ ಎಂಬುದಾಗಿ ಅರ್ಥಮಾಡಿಕೊಳ್ಳಬೇಕು.(ಒತ್ತು ನೀಡಲಾಗಿದೆ)

15. ಸಿತು ಸಾಹು ಮತ್ತು ಇತರರು -ವಿರುದ್ಧ-ಜಾರ್ಖಂಡ್ ರಾಜ್ಯ ಮತ್ತು ಇತರರು ಹಾಗೂ ಜಾಯಿಂಟ್ ಕಲೆಕ್ಟರ್, ರಂಗಾರೆಡ್ಡಿ ಡಿಸ್ಟ್ರಿಕ್ಟ್ ಮತ್ತು ಇನ್ನೊಬ್ಬರು -ವಿರುದ್ಧ-ಡಿ.ನರ್ಸಿಂಗ್ ರಾವ್ ಮತ್ತು ಇತರರು ಮೊಕದ್ದಮೆಗಳು ಸೇರಿದಂತೆ ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಪುಗಳಲ್ಲಿ ಇದನ್ನು ಅನುಸರಿಸಿದ್ದು, ಚ ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು, ಈ ವಿಷಯದ ಬಗೆಗಿನ ಕಾನೂನನ್ನು ಚ ಪುನರ್ ಪರಿಶೀಲಿಸಿದ ನಂತರ, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

“31. ಒಟ್ಟಾರೆಯಾಗಿ ಹೇಳುವುದಾದರೆ, ಪುನರವಲೋಕನ ಅಧಿಕಾರ ವ್ಯಾಪ್ತಿಯ ವಿಳಂಬ ಚಲಾವಣೆಯನ್ನು ವಿರೋಧಿಸಲಾಗಿದೆ.ಏಕೆಂದರೆ, ಕ್ರಮಗಳು ಅಥವಾ ವಹಿವಾಟುಗಳು ಸದಾ ಸವಾಲಿಗೆ ಮುಕ್ತವಾಗಿ ಉಳಿಯಬೇಕಿದ್ದರೆ, ಅದು ಮಾನವ ವ್ಯವಹಾರಗಳಲ್ಲಿ ತಪ್ಪಿಸಬಹುದಾದ ಮತ್ತು ಅಂತ್ಯವಿಲ್ಲದ ಅನಿಶ್ಚಿತತೆಯನ್ನು ಅರ್ಥೈಸುತ್ತದೆ.ಇದು ಕಾನೂನಿನ ನೀತಿಯಲ್ಲ.ಏಕೆಂದರೆ, ಅಂತಹ ಅಧಿಕಾರಗಳನ್ನು ಚಲಾಯಿಸಲು ಯಾವುದೇ ಕಾಲ ಪರಿಮಿತಿಯನ್ನು ನಿಗದಿಪಡಿಸದಿದ್ದಾಗಲೂ, ಮಧ್ಯಂತರ ವಿಳಂಬವು ಮೂರನೇ ಪಕ್ಷಕಾರರ ಹಕ್ಕುಗಳ ಸೃಜನೆಗೆ ಕಾರಣವಾಗಬಹುದು.ವಿವೇಚನಾಧಿಕಾರವನ್ನು ತಡವಾಗಿ ಚಲಾಯಿಸುವುದರಿಂದ ಅದರಲ್ಲಿಯೂ ವಿಶೇಷವಾಗಿ, ವಿಳಂಬಕ್ಕೆ ಯಾವುದೇ ಸ್ಪಷ್ಟ ವಿವರಣೆಯಿಲ್ಲದಿದ್ದಾಗ, ಅದನ್ನು ಹಾಳು ಮಾಡಲಾಗುವುದಿಲ್ಲ.ಕಾನೂನಿನ ನಿಯಮವು ಜೀವನದ ನಿಯಮಕ್ಕೂ ನಿಕಟವಾಗಿ ಅನ್ವಯಿಸಬೇಕು ಎಂದು ಹೇಳಲಾಗಿದೆ.ಪರಿಷ್ಕರಿಸಲು ಕೋರಲಾದ ಆದೇಶಗಳು ವಂಚನೆಯಿಂದ ಕೂಡಿದ್ದ ಪ್ರಕರಣಗಳಲ್ಲಿಯೂ ಸಹ, ಅಧಿಕಾರದ ಚಲಾವಣೆಯು ವಂಚನೆ ಪತ್ತೆಯಾದ ಯುಕ್ತ ಅವಧಿಯೊಳಗಿರಬೇಕು.ಒಂದು ಕೃತ್ಯ ಅಥವಾ ವಹಿವಾಟನ್ನು ವಂಚನೆ ಎಂದು ಸರಳವಾಗಿ ವಿವರಿಸುವುದು ಅದರ ತಿದ್ದುಪಡಿಗೆ ಅಂತ್ಯವಿಲ್ಲದ ಸಮಯವನ್ನು ವಿಸ್ತರಿಸುವುದಿಲ್ಲ; ಹಾಗಿಲ್ಲದಿದ್ದರೆ, ಪುನರವಲೋಕನ ಅಧಿಕಾರದ ಚಲಾವಣೆಯು, ಅಧಿಕಾರದಲ್ಲಿ ಅಂಥ ಅಧಿಕಾರವನ್ನು ನಿಹಿತಗೊಳಿಸಿದೆಯೆಂಬ ಶಾಸನದ ಮೇಲಿನ ವಂಚನೆಗೆ ಸಮನಾಗಿರುತ್ತದೆ.

32. ಪ್ರಸ್ತುತ ಪ್ರಕರಣದಲ್ಲಿ, ಸರಿಪಡಿಸಬೇಕೆಂದು ಕೋರಲಾದ ನಮೂದನ್ನು ವಂಚನೆಯೆಂದು ವಿವರಿಸುವಾಗ, ರಾಜ್ಯವು ಆಪಾದಿತ ವಂಚನೆಯನ್ನು ಯಾವಾಗ ಪತ್ತೆ ಹಚ್ಚಿತು?ಎಂಬ ಬಗ್ಗೆ ಉಚ್ಚ ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾದ ನೋಟೀಸಿನಲ್ಲಿ ಏನೂ ಉಲ್ಲೇಖವಿಲ್ಲ.ಅದು ನ್ಯಾಯಿಕ ಅಧಿಕಾರವ್ಯಾಪ್ತಿಯ ಅಂಶವಾಗಿದ್ದ ಕಾರಣ, ಆ ಬಗ್ಗೆ ಒಂದು ನಿರ್ದಿಷ್ಟ ಹೇಳಿಕೆಯ ಅವಶ್ಯಕತೆಯಿತ್ತು.ಅದನ್ನು ಎದುರುದಾರರಿಗೆ ನೀಡಲಾದ ನೋಟೀಸಿನಲ್ಲಿ ಸ್ಪಷ್ಟವಾಗಿ ಹೇಳಲೇಬೇಕಿತ್ತು.ಆಪಾದಿಸಲಾದ ವಂಚನೆಯನ್ನು ಪತ್ತೆ ಮಾಡಿದ ಯುಕ್ತ ಅವಧಿಯಲ್ಲಿ ನೋಟೀಸನ್ನು ನೀಡಲಾಯಿತು ಎಂಬುದನ್ನು ತೋರಿಸಲು ಅಪೀಲುದಾರ ರಾಜ್ಯವು ಮಾಡಿದ ಪ್ರಯತ್ನವು, ಈ ಕಾರಣದಿಂದ ನಿಷ್ಪ್ರಯೋಜಕವಾಗಿದೆ.1991 ರ ವರ್ಷದಲ್ಲಿ ಸರ್ಕಾರವು ಪಶ್ನಿತ ಭೂಮಿಯನ್ನು ಸರ್ಕಾರಿ ನೌಕರರಿಗೆ ವಸತಿ ನಿವೇಶನಗಳಿಗಾಗಿ ಯಾವುದೇ ದರದಲ್ಲಿ ನೀಡಲು ಅನುಮತಿಸಿದಾಗ ಅಧಿಕೃತ ವ್ಯವಹಾರದ ಸಾಧಾರಣ ಕ್ರಮದಲ್ಲಿ ಮಾಡಲಾದ ಭೂಮಿಯ ಒಂದು ಭಾಗಕ್ಕೆ ಸಂಬಂಧಿಸಿದ ದಾಖಲೆಯ ಬಗ್ಗೆ ಮತ್ತು ಕಂದಾಯ ನಮೂದುಗಳ ಬಗ್ಗೆ ತಿಳಿದಿದೆಯೆಂದು ಭಾವಿಸಬೇಕು.ನೋಟೀಸನ್ನು 31.12.2004 ರಷ್ಟು ವಿಳಂಬವಾಗಿ ನೀಡಲಾದ ಮಟ್ಟಿಗೆ ಅದು ಸುಮಾರು 13 ವರ್ಷಗಳಷ್ಟು ವಿಳಂಬವಾಗಿತ್ತು.ಅದನ್ನು 1991 ರ ವರ್ಷದಿಂದ ಮಾತ್ರ ಎಣಿಸಬೇಕೆಂದು ಭಾವಿಸಿ, ಈ ವಿಳಂಬಕ್ಕೂ ಸಹ ಯಾವುದೇ ವಿವರಣೆ ನೀಡಿಲ್ಲ.ಯಾವುದೇ ದೃಷ್ಟಿಕೋನದಿಂದ ತೀರ್ಮಾನಿಸಿದರೂ, ಅರ್ಧ ಶತಮಾನಕ್ಕೂ ಮುಂಚೆ ಮಾಡಿದ್ದ ನಮೂದುಗಳನ್ನು ಹಿಮ್ಮುಖಗೊಳಿಸಲು ಕೋರುವ ನೋಟೀಸು ಸ್ಪಷ್ಟವಾಗಿ ಯುಕ್ತ ಸಮಯವನ್ನು ಮೀರಿತ್ತು ಹಾಗೂ ಅದನ್ನು ಸರಿಯಾಗಿಯೇ ರದ್ದುಪಡಿಸಲಾಗಿದೆ.

16. ಛೇದಿ ಲಾಲ್ ಯಾದವ್ ಮತ್ತು ಇತರರು -ವಿರುದ್ಧ ಹರಿ ಕಿಶೋರ್ ಯಾದವ್ (ಮೃತ) ಕಾನೂನು ಪ್ರತಿನಿಧಿಗಳ ಮುಖಾಂತರ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನೀಡಿದ ತೀರ್ಪಿನಲ್ಲಿ, ಈ ಕೆಳಗಿನಂತೆ ತೀರ್ಮಾನಿಸಿದೆ:

12. ಜಮೀನುಗಳ ಮರುಸ್ವಾಧೀನಕ್ಕಾಗಿ ಹೆಚ್ಚುವರಿ ಕಲೆಕ್ಟರ್‌ವರ ಅಧಿಕಾರವನ್ನು ಸ್ವ-ಪ್ರೇರಣೆಯಿಂದ ಚಲಾಯಿಸಬಹುದಾಗಿತ್ತು ಮತ್ತು ಅಂತಹ ಅಧಿಕಾರವನ್ನು ಚಲಾಯಿಸಲು ಯಾವುದೇ ಮಿತಿಯನ್ನು ನಿಗದಿಪಡಿಸಿರದಿದ್ದ ಕಾರಣ, ಈ ಪ್ರಕರಣದಲ್ಲಿನ ವಿಳಂಬವನ್ನು ಕಡೆಗಣಿಸಬಹುದು ಎಂದು ಅಪೀಲುದಾರರ ಪರ ವಾದಿಸಲಾಗಿದೆ.ಅಧಿಕಾರವನ್ನು ಸ್ವಪ್ರೇರಣೆಯಿಂದ ಚಲಾಯಿಸುವಲ್ಲಿ ಅ ಂ ತಹ ಚಲಾವಣೆಯನ್ನು

ಯಾವುದೇ ಸಮಯದಲ್ಲಿ ಕೈಗೊಳ್ಳಬಹುದು ಎಂದು ಈ ವಾದವು ಊಹಿಸುತ್ತದೆ.ಅಂತಹ ಅಧಿಕಾರವನ್ನು ಯಾವುದೇ ಸಮಯದಲ್ಲಿ ಕೈಗೊಳ್ಳಬಹುದು.ಕಲೆಕ್ಟರ್ -ವಿರುದ್ಧ-ಡಿ.ನರ್ಸಿಂಗ್ ರಾವ್ ಕಲೆಕ್ಟರ್ -ವಿರುದ್ಧ ಡಿ. ನರ್ಸಿಂಗ್ ರಾವ್, (2015) 3 ಎಸ್ಸಿಸಿ 695 (2015) 2 ಎಸ್ಸಿಸಿ (ಸಿವಿಲ್) 396 ಮೊಕದ್ದಮೆಗಳಲ್ಲಿ ಈ ನ್ಯಾಯಾಲಯದ ತೀರ್ಪಿಗೆ ಈ ವಾದವು ತದ್ವಿರುದ್ಧವಾಗಿದೆ.ಅಲ್ಲಿ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ಕಲೆಕ್ಟರ್ -ವಿರುದ್ಧ ಚ ಡಿ. ನರ್ಸಿಂಗ್ ರಾವ್, 2010 ಎಸ್ಸಿಸಿ ಆನ್ಲೈನ್ ಎಪಿ 406:2010) 6 ಎಎಲ್ಡಿ 748] ಈ ನ್ಯಾಯಾಲಯವು ಸಮರ್ಥಿಸಿದೆ. ಆ ತೀರ್ಪಿನ '17 ನೇ ಕಂಡಿಕೆಯನ್ನು ಈ ಮುಂದಿನಂತೆ ಓದಲಾಗಿದೆ:(ಡಿ. ನರ್ಸಿಂಗ್ ರಾವ್ ಪ್ರಕರಣ [ಕಲೆಕ್ಟರ್ -ವಿರುದ್ಧ-ಡಿ.ನರ್ಸಿಂಗ್ ರಾವ್ (2015) 3 ಎಸ್ಸಿಸಿ 695:(2015) 2 ಎಸ್ಸಿಸಿ (ಸಿವಿಲ್) 396], ಪುಟ 706, ಪ್ಯಾರಾ 17)

"17. ಯಾವುದೇ ಕಾಲಪರಿಮಿತಿಯು ಇಲ್ಲದಿದ್ದರೂ ಕೈಗೊಳ್ಳಲಾದ ಸ್ವ-ಪ್ರೇರಣೆಯ ಪುನರವಲೋಕನವು ದೀರ್ಘಕಾಲ ಕಳೆದ ನಂತರ ನಿರಂಕುಶವಾಗಿದ್ದು ಅದು ಕಾನೂನಿನ ನಿಯಮದ ಪರಿಕಲ್ಪನೆಗೆ ವಿರುದ್ಧವಾಗಿತ್ತು ".

ಹೀಗಾಗಿ, ನಾವು ಈ ವಾದವನ್ನು ಯಾವುದೇ ಹಿಂಜರಿಕೆಯಿಲ್ಲದೆ ತಿರಸ್ಕರಿಸುತ್ತೇವೆ.

13. ನಮ್ಮ ದೃಷ್ಟಿಯಲ್ಲಿ, ಯಾವುದೇ ಕಾಲ ಪರಿಮಿತಿಯನ್ನು ನಿಗದಿಪಡಿಸಿರದಿದ್ದಲ್ಲಿ, ಸ್ವ-ಪ್ರೇರಣೆಯಿಂದಾಗಲೀ ಅಥವಾ ಪಕ್ಷಕಾರರ ಅರ್ಜಿಗಳ ಮೇಲಾಗಲೀ ಯುಕ್ತ ಸಮಯದೊಳಗೆ ಕ್ರಮ ಕೈಗೊಳ್ಳಬೇಕು.ನಿಸ್ಸಂದೇಹವಾಗಿ, ಸಮಂಜಸವಾದ ಸಮಯವು ಪ್ರತಿಯೊಂದು ಪ್ರಕರಣದ ಸಂದರ್ಭಗಳು ಮತ್ತು ಶಾಸನದ ಉದ್ದೇಶವನ್ನು ಅವಲಂಬಿಸಿರುತ್ತದೆ.ನಮ್ಮ ಮುಂದಿರುವ ಮೊಕದ್ದಮೆಯಲ್ಲಿ ನಿರ್ದಿಷ್ಟವಾಗಿ, ಈ ಅವಧಿಯಲ್ಲಿ ನಿಸ್ಸಂಶಯವಾಗಿ, ಅದು ಯಾವುದೇ ಹಕ್ಕುಗಳಿಗೆ ಒಳಪಡುವುದಿಲ್ಲ ಎಂಬ ನಂಬಿಕೆಯಲ್ಲಿ ಭೂಮಿಯನ್ನು ಹಲವಾರು ಬಾರಿ ವರ್ಗಾಯಿಸಲಾಗಿರುವ ಸಂಗತಿಯ ಹಿನ್ನೆಲೆಯಲ್ಲಿ ಬಹಳ ವಿಳಂಬವಾಗಿ ಮತ್ತು ಯುಕ್ತ ಸಮಯವನ್ನು ಮೀರಿ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ನಮಗೆ ಸ್ಪಷ್ಟವಾಗಿದೆ.

14. ಶಾಸನವು ಪ್ರಯೋಜನಕಾರಿಯಾಗಿದೆ ಮತ್ತು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿಲ್ಲ ಎಂಬ ಕಾರಣ ಮಾತ್ರದಿಂದಲೇ ವ್ಯಕ್ತಿಗಳು ಆರ್ಜಿಸಿದ ಹಕ್ಕುಗಳನ್ನು ಲಘುವಾಗಿ ನಿರ್ಲಕ್ಷಿಸಲಾಗುವುದಿಲ್ಲ ಮತ್ತು ಸಿತು ಸಾಹು ವಿ. ಜಾರ್ಖಂಡ್ ರಾಜ್ಯ [ಸಿತು ಸಾಹು -ವಿರುದ್ಧ ಜಾರ್ಖಂಡ್ ರಾಜ್ಯ, (2004) 8 ಎಸ್ಸಿ 340] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅಭಿ ಪ್ರಾಯಪಟ್ಟಿರುವಂತೆ ಅನುಚಿತ ವಿಳ ಂ ಬದ ನ ಂ ತರ ವ್ಯವಹರಣೆಗಳನ್ನು ಪ್ರಾರಂಭಿಸುವಂತಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದೆ.

(ಒತ್ತು ನೀಡಲಾಗಿದೆ)

17. ಪಿಟಿಸಿಎಲ್ ಅಧಿನಿಯಮದ ಉಪಬಂಧಗಳು ಮತ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ, ಈ ಮೇಲೆ ಹೇಳಲಾದ ತೀರ್ಪುಗಳನ್ನು ನೀಡಿರುವುದಿಲ್ಲ ಎಂದು ಹೇಳುವುದು ಸೂಕ್ತವಾಗಿದೆ.ಆದಾಗ್ಯೂ, ನಿಕ್ಕಂಟಿ ರಾಮ ಲಕ್ಷ್ಮೀ e -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು, ಪಿಟಿಸಿಎಲ್ ಅಧಿನಿಯಮದ ಅಡಿಯಲ್ಲಿನ ವ್ಯವಹರಣೆಗಳಿಗೆ ಅಸಮಂಜಸವಾದ ದೀರ್ಘಾವಧಿಯ ನಂತರ ವ್ಯವಹರಣೆಗಳನ್ನು ನಿಯಂತ್ರಿಸುವ ಸುಸ್ಥಾಪಿತವಾದ ನಿಯಮಗಳನ್ನು ಅನ್ವಯಿಸಿದೆ ಹಾಗೂ ಅದರ ಪರಿಣಾಮವಾಗಿ ಈ ಕೆಳಗಿನಂತೆ ತೀರ್ಮಾನಿಸಿದೆ:

9. ಹಾಗಿದ್ದರೂ, ಅಲ್ಲಿ ಉದ್ಭವಿಸುವ ಪ್ರಶ್ನೆಯೆಂದರೆ, ಅಧಿ ನಿಯಮದ 5 ನೇ ಪ್ರಕರಣದ ನಿಬಂಧನೆಗಳಿಗೆ ಸಂಬಂಧಿಸಿದ್ದಾಗಿದ್ದು, ಅದು ಅಧಿನಿಯಮದ 4 ನೇ ಪ್ರಕರಣದ ಅಡಿಯಲ್ಲಿ ವರ್ಗಾವಣೆಯನ್ನು ಶೂನ್ಯವೆ ಂ ದು ಅನೂರ್ಜಿತಗೊಳಿಸಿದ್ದಕ್ಕಾಗಿ ಅಂತಹ ಅರ್ಜಿಯನ್ನು ಸಲ್ಲಿಸಲು ಯಾರೇ ಹಿತಾಸಕ್ತ ವ್ಯಕ್ತಿಗೆ ಸಾಧ್ಯಗೊಳಿಸುತ್ತದೆ.ಯಾವ ಅವಧಿಯೊಳಗೆ ಅಂಥ ಅರ್ಜಿಯನ್ನು ಸಲ್ಲಿಸಬೇಕು ಎಂಬುದನ್ನು ಈ ಪ್ರಕರಣವು ನಿಗದಿಗೊಳಿಸುವುದಿಲ್ಲ.ಸ್ವ ಪ್ರೇರಣೆಯ ಕ್ರಮ ತೆಗೆದುಕೊಳ್ಳಬಹುದಾದ ಅವಧಿಯನ್ನೂ ಸಹ ನಿಗದಿಗೊಳಿಸಿಲ್ಲ.ಛೇದಿ ಲಾಲ್ ಯಾದವ್ -ವಿರುದ್ಧ-ಹರಿ ಕಿಶೋರ್ ಯಾದವ್ (ಡಿ) ಕಾನೂನು ಪ್ರತಿನಿಧಿಗಳ ಮುಖಾಂತರ, 2017 ( 6) ಸ್ಕೇಲ್ 459 ಮೊಕದ್ದಮೆಯಲ್ಲಿ ಮತ್ತು ನಿಂಗಪ್ಪ.-ವಿರುದ್ಧ-ಡೆಪ್ಯುಟಿ ಕಮಿಷನರ್ (ಸಿ.$$_0_$$ ಸಂಖ್ಯೆ.3131/2007, 14.07.2011 ರಂದು ನಿರ್ಧರಿಸಲಾಯಿತು) ಮೊಕದ್ದಮೆಯಲ್ಲಿಯೂ ಸಹ ಈ ನ್ಯಾಯಾಲಯವು, ಕಾಲಪರಿಮಿತಿಗಾಗಿ ಉಪಬಂಧಿಸಲಾದ ಶಾಸನವನ್ನು ಶಾಸನದ ಉಪಬಂಧಗಳನ್ನು ಯುಕ್ತ

ಸಮಯದೊಳಗಾಗಿ ಅನ್ವಯಿಸಬೇಕಾಗಿದೆಯೇ ಎಂಬ ಕಾನೂನಿನಲ್ಲಿ ಸ್ಥಾಪಿತವಾದ ನಿಲುವನ್ನು ಪುನರುಚ್ಚರಿಸಿದೆ.ಯುಕ್ತ ಸಮಯದೊಳಗೆ ಪಕ್ಷಕಾರರ ಅರ್ಜಿಯ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕೇ?ಅಥವಾ ಸ್ವಪ್ರೇರಣೆಯಿಂದ ತೆಗೆದುಕೊಳ್ಳಬೇಕೇ ಎಂದು ತೀರ್ಮಾನಿಸಿದೆ.ಆ ಕ್ರಮವು, ಬಾಡಿಗೆಯ ಬಾಕಿ ಮೊತ್ತಗಳಿಗಾಗಿ ಮಾರಾಟ ಮಾಡಲಾಗಿದ್ದ ಅಥವಾ 1 ನೇ ಜನವರಿ, 1939 ರಿಂದ 31 ನೇ ಡಿಸೆಂಬರ್, 1950 ರ ವರೆಗೆ ಅವುಗಳಿಂದ ಭೂಮಿಯ ಬಾಕಿ ಮೊತ್ತಗಳಿಗಾಗಿ ಹೊರದೂಡಲ್ಪಟ್ಟಿದ್ದಂತಹ ರೈತರಿಗೆ ಕೆಲ ಜಮೀನುಗಳ ಮರು ಸ್ವಾಧೀನಕ್ಕಾಗಿ ಉಪಬಂಧಿಸಿದ್ದೂ, ಅದೇ ರೀತಿಯ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಉದ್ಭವಿಸಿರುತ್ತದೆ.ಈ ಪರಿಹಾರವನ್ನು ರೈತರಿಗೆ ಕೃಷಿ ಕೆಲಸಗಳನ್ನು ಅಸಾಧ್ಯಗೊಳಿಸಿದಂಥ ಕೋಸಿ ನದಿಯ ಪ್ರವಾಹದಿಂದ ಕಂಗೆಟ್ಟ ರೈತರಿಗೆ ನೀಡಲಾಗಿತ್ತು.ಅದನ್ನು ಪುನಃ ಸ್ವಾಧೀನತೆಗೆ ತರಲು 24 ವರ್ಷಗಳ ನಂತರ ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಲಾಗಿತ್ತು.ಆ ಹಿನ್ನೆಲೆಯಲ್ಲಿ, ಹಾಗೆ ಮಾಡುವುದು ಸಮಂಜಸವಲ್ಲ ಎಂದು ಈ ನ್ಯಾಯಾಲಯವು ನಿರ್ಧರಿಸಿತು.ಎದುರುದಾರ-ರಾಜಪ್ಪನು ಭೂಮಿಯ ಮರು ಸ್ವಾಧೀನಕ್ಕಾಗಿ ಸಲ್ಲಿಸಿದ ಪ್ರಸ್ತುತ ಅರ್ಜಿಯನ್ನು ಸಮಂಜಸವಲ್ಲದ ದೀರ್ಘ ಕಾಲದ ನಂತರ ಸಲ್ಲಿಸಿದ್ದು, ಅದನ್ನೂ ಆ ಕಾರಣದ ಮೇಲೆ ವಜಾಗೊಳಿಸಲು ತಕ್ಕದ್ದಾಗಿದೆ ಎಂಬುದನ್ನು ಎತ್ತಿಹಿಡಿಯುವಲ್ಲಿ ನಮಗೆ ಯಾವುದೇ ಹಿಂಜರಿಕೆಯಿಲ್ಲ.ಅದಕ್ಕನುಸಾರವಾಗಿ, ಅಧಿನಿಯಮದ 5 ನೇ ಪ್ರಕರಣವು ಯಾವುದೇ ಕಾಲಮಿತಿಯನ್ನು ಉಪಬಂಧಿಸಿಲ್ಲ, ಆದುದರಿಂದ ಅರ್ಜಿಯನ್ನು ಯಾವುದೇ ಸಮಯದಲ್ಲಾದರೂ ಸಲ್ಲಿಸಬಹುದು ಎಂಬುದಾಗಿ ಅಭಿಪ್ರಾಯಪಟ್ಟಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪುಗಳು ಎಂದರೆ, ಆರ್. ರುದ್ರಪ್ಪ.ವಿರುದ್ಧ ಡೆಪ್ಯುಟಿ ಕಮಿಷನರ್, 2000 ( 1) ಕರ್ನಾಟಕ ಲಾ ಜರ್ನಲ್, 523; ಮದ್ದೂರಪ್ಪ ವಿ. ಕರ್ನಾಟಕ ರಾಜ್ಯ, 2006 ( 4) ಕರ್ನಾಟಕ ಲಾ ಜರ್ನಲ್, 303 ಮತ್ತು ಜಿ. ಮಾರೇಗೌಡ ವಿರುದ್ಧ-ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ, 2000 ( 2) ಕೆಆರ್.ಎಲ್.ಜೆ.ಎಸ್ಎಚ್.ಎನ್ .4 ಬಿ ತೀರ್ಪುಗಳನ್ನು ರದ್ದುಪಡಿಸಲಾಗಿದೆ.

18. ತರುವಾಯ, ಛೇದಿ ಲಾಲ್ ಯಾದವ್ ಮೊಕದ್ದಮೆ ಮತ್ತು ನೆಕ್ಕಂಟಿ ರಾಮಲಕ್ಷ್ಮಿ ಮೊಕದ್ದಮೆಯಲ್ಲಿ ಈ ಮೇಲೆ ಹೇಳಲಾದ ತೀರ್ಪುಗಳನ್ನು ಅನುಸರಿಸಲಾಯಿತು ಮತ್ತು ವಿವೇಕ್ ಎಂ. ಹಿಂದುಜಾ ಮತ್ತು ಇತರರು -ವಿರುದ್ಧ-ಎಂ.ಅಶ್ವಥ್ ಮತ್ತು ಇತರರು (ಮೇಲಿನಂತೆ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಮರು ಸಮರ್ಥಿಸಿತು, ಅದರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

4. ಪ್ರಸ್ತುತ ಅಪೀಲುದಾರರು ಕರ್ನಾಟಕ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು ತಮ್ಮ ಹಕ್ಕು ಸ್ವಾಮ್ಯಗಳನ್ನು ಖಚಿತಗೊಳಿಸಿ ಕೊಂಡಿದ್ದಾರೆಯೇ?ಎಂಬ ಬಗ್ಗೆ ನಮ್ಮ ಮುಂದೆ ವಾದಗಳನ್ನು ೧ ಸುದೀರ್ಘವಾಗಿ ಮಂಡಿಸಲಾಗಿದೆ.ನಾವು ಈ ಪ್ರಶ್ನೆಗೆ ಉತ್ತರಿಸುವ ಗೋಜಿಗೆ ಹೋಗುವುದಿಲ್ಲ.ಏಕೆಂದರೆ, ಛೇದಿ ಲಾಲ್ ಯಾದವ್ -ವಿರುದ್ಧ ಹರಿ ಕಿಶೋರ್ ಯಾದವ್ (ಡಿ) ಕಾನೂನು ಪ್ರತಿನಿಧಿಗಳ ಮುಖಾಂತರ ಮತ್ತು ನೆಕ್ಕಂಟಿ ರಾಮ ಲಕ್ಷ್ಮಿ ಎ ವಿರುದ್ಧ ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಇತ್ಯರ್ಥಪಡಿಸಿದ ಅಂಶದ ಮೇಲೆ ಸದ್ಯದ ವಿಷಯಗಳನ್ನು ನಿರ್ಧರಿಸಬಹುದು.ಈ ಎರಡು ನಿರ್ಣಯಗಳಲ್ಲಿ ಕರ್ನಾಟಕ ಅಧಿನಿಯಮದ ಅಡಿಯಲ್ಲಿ ಉದ್ಭವಿಸಿದ ಒಂದರಲ್ಲಿ, ಈ ನ್ಯಾಯಾಲಯವು, ಮೂಲ ಅನುದಾನಿತರು ಹೂಡಿರುವರೆಂದು ತಾರ್ತವಾಗುವ ವ್ಯವಹರಣೆಗಳ ರದ್ದುಪಡಿಸುವ ಅಧಿಕಾರ ವಹಿಸಿಕೊಡಲಾದ ಪ್ರಾಧಿಕಾರಗಳು ಅರ್ಜಿಯ ಆಧಾರದ ಮೇಲೆ ಅಥವಾ ಸ್ವಪ್ರೇರಣೆಯಿಂದ, ಅಂಥ ಕ್ರಮವನ್ನು ಕೈಗೊಳ್ಳಲು ಕಾನೂನು ಯಾವುದೇ ಸಮಯವನ್ನು ನಿಗದಿಪಡಿಸಿಲ್ಲದ ಕಾರಣ, ಯುಕ್ತ ಸಮಯದೊಳಗಾಗಿ ಹಾಗೆ ಮಾಡಲು ತಮ್ಮ ಅಧಿಕಾರಗಳನ್ನು ಚಲಾಯಿಸಬೇಕು ಎಂದು ಅಭಿಪ್ರಾಯಪಟ್ಟಿದೆ.ನಿರ್ಣಯಿಸಲಾದ ಪ್ರಕರಣಗಳಲ್ಲಿ, ಕರ್ನಾಟಕ ಅಧಿನಿಯಮವು ಜಾರಿಗೆ ಬಂದ ಸುಮಾರು 20 ರಿಂದ 25 ವರ್ಷಗಳ ನಂತರ ಕ್ರಮ ಕೈಗೊಳ್ಳಲಾಗಿತ್ತು.

5. ಪ್ರಸ್ತುತ ಮೊಕದ್ದಮೆಯಲ್ಲಿ, ಕರ್ನಾಟಕ ಅಧಿನಿಯಮವು ಜಾರಿಗೆ ಬಂದ ಸುಮಾರು 20 ವರ್ಷಗಳ ನಂತರ ಕ್ರಮ ಕೈಗೊಳ್ಳಲಾಗಿತ್ತು ಎಂಬುದು ನಿರ್ವಿವಾದ.ತಾತ್ವಿಕವಾಗಿ, ಸದ್ಯದ ಮೊಕದ್ದಮೆಗಳಲ್ಲಿನ ವಿಳಂಬವನ್ನು ಸಮ ೦ ಜಸವೆಂದು ಏಕೆ ಪರಿಗಣಿಸಬೇಕು?ಎಂಬುದಕ್ಕೆ ನಮಗೆ ಯಾವುದೇ ಕಾರಣ ಕಂಡುಬಂದಿಲ್ಲ.ಪ್ರಸ್ತುತ ಮೊಕದ್ದಮೆಗಳಲ್ಲಿ ಮತ್ತು ನಿರ್ಣಯವಾದ ಪ್ರಕರಣಗಳಲ್ಲಿನ ವಿಳಂಬದ ಅವಧಿಯ ನಡುವೆ ಮುಖ್ಯ ವ್ಯತ್ಯಾಸವೇನಿಲ್ಲ.

6. ಮಂಚೇಗೌಡ -ವಿರುದ್ಧ ಕರ್ನಾಟಕ ರಾಜ್ಯ (1984) 3 ಎಸ್ಸಿಸಿ 301 ಮತ್ತು ಸುಂಕರ ರಾಜಯಲಕ್ಷ್ಮಿ -ವಿರುದ್ಧ ಕರ್ನಾಟಕ ರಾಜ್ಯ (2009) 12 ಎಸ್ಸಿಸಿ 193 ಮೊಕದ್ದಮೆಯಲ್ಲಿನ ಕೆಲವು ಅಭಿಪ್ರಾಯೋಕ್ತಿಗಳ ಮೇಲೆ ಅವಲಂಬಿಸಿ, ಎದುರುದಾರರ ಕಡೆಯ ಮಾನ್ಯ ವಕೀಲರು ಕ್ರಮವನ್ನು ಪ್ರಾರಂಭಿಸಲು ವಾಸ್ತವಿಕ ಪರಿಮಿತಿಯು 30 ವರ್ಷಗಳಾಗಿರತಕ್ಕದ್ದು ಎಂದು ವಾದಿಸಿದ್ದಾರೆ.

7. ಹಾಗಿದ್ದರೂ, ಆ ಮೊಕದ್ದಮೆಗಳಲ್ಲಿನ ಅಭಿಪ್ರಾಯೋಕ್ತಿಗಳು ಸಮಂಜಸವಾಗಿವೆ ಮತ್ತು ಅವುಗಳನ್ನು ಕಾಲಪರಿಮಿತಿ ಅಧಿನಿಯಮ, 1963 ರ ಅಡಿಯಲ್ಲಿ ಸರ್ಕಾರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಅವಧಿಗೆ ಸಂಬಂಧಿಸಿದಂತೆ ಮಾಡಲಾಗಿದೆ ಎಂದು ನಮಗೆ ಕಂಡುಬಂದಿದೆ.

8. ಕರ್ನಾಟಕ ಅಧಿನಿಯಮದ 4 ನೇ ಪ್ರಕರಣವು ತನ್ನದೇ ಉಲ್ಲಂಘನೆಯಲ್ಲಿ ಮಾಡಲಾದ ವರ್ಗಾವಣೆಯನ್ನು ಸ್ವಶಕ್ತಿಯಿಂದ ರದ್ದುಗೊಳಿಸುತ್ತದೆ ಎ ಂ ದು ಎದುರುದಾರರ ಪರವಾಗಿ ವಾದಿಸಲಾಯಿತು.ಆದುದರಿಂದ, ವ್ಯವಹರಣೆಗಳನ್ನು 20 ರಿಂದ 25 ವರ್ಷಗಳ ನಂತರವೂ ಸಹ ಪ್ರಾರಂಭಿಸಿದಲ್ಲಿ, ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ.

9. ಈ ವಾದಕ್ಕೆ ಸಮ್ಮತಿಸುವುದು ಸಾಧ್ಯವೆಂದು ನಮಗೆ ಕಂಡುಬಂದಿಲ್ಲ.ಕಾಂಡದ ಬಂದರಿನ ಟ್ರಸ್ಟಿಗಳ ಮಂಡಳಿ ವಿರುದ್ಧ ಹರ್ಗೋವಿಂದ್ ಜಸ್ರಾ (2013) 3 ಎಸ್ಸಿಸಿ 182 ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಪ್ರಶ್ನಿತ ಆದೇಶವನ್ನು ಶೂನ್ಯ ಮತ್ತು ಅನೂರ್ಜಿತ ಎಂದು ಘೋಷಿಸುವುದಕ್ಕೆ ಮುಂಚೆ, ಸಕ್ಷಮ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಆದೇಶದ ಅಗತ್ಯವಿರುವುದನ್ನು ಪುನರುಚ್ಚರಿಸಿದೆ.ನ್ಯಾಯಾಲಯವು ಸ್ಮಿತ್ -ವಿರುದ್ಧ-ಈಸ್ಟ್ ಎಲ್ಲೋ ರೂರಲ್ ಡಿಸ್ಟ್ರಿಕ್ಟ್ ಕೌನ್ಸಿಲ್ 1956 ಎ ಎಸಿ 736:(1956) 2 ಡಬ್ಲ್ಯುಎಲ್‌ಆರ್ 888 ಮೊಕದ್ದಮೆಯಲ್ಲಿ ಉಲ್ಲೇಖಿಸಲಾದ ಕಂಡಿಕೆಯನ್ನು ಅವಲಂಬಿಸಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

66 ಒಂದು ಆದೇಶವನ್ನು ಸದ್ಭಾವನೆಯಿಂದ ಮಾಡಿರದಿದ್ದರೂ ಸಹ, ಆಗಲೂ ಅದು ಕಾನೂನು ಪರಿಣಾಮಗಳನ್ನುಂಟು ಮಾಡಬಲ್ಲ ಕಾರ್ಯವಾಗಿದೆ.ಅದು ತನ್ನ ಹಣೆಯಲ್ಲಿ ಅಸಿಂಧುತ್ವದ ಬ್ರಾಂಡ್ ಅನ್ನು ಹೊಂದಿರುವುದಿಲ್ಲ.ಅಸಿಂಧುತ್ವದ ಕಾರಣವನ್ನು ಸುಸ್ಥಾಪಿಸಲು ಅಥವಾ ಅದನ್ನು ರದ್ದುಗೊಳಿಸಲು ಅಥವಾ ಬೇರೆ ರೀತಿಯಲ್ಲಿ, ಕಾನೂನಿನಲ್ಲಿ ಅಗತ್ಯ ವ್ಯವಹರಣೆಗಳನ್ನು ತೆಗೆದುಕೊಂಡ ಹೊರತು, ಅತ್ಯಂತ ದೋಷರಹಿತ ಆದೇಶಗಳಾಗಿ ತನ್ನ ತೋರಿಕೆಯ ಉದ್ದೇಶಗಳಿಗಾಗಿ ಪರಿಣಾಮಕಾರಿಯಾಗಿ ಉಳಿಯುತ್ತದೆ.(ಸ್ಮಿತ್ ಪ್ರಕರಣ ಎಸಿ ಪಿಪಿ 769-70) (ಒತ್ತು ನೀಡಲಾಗಿದೆ) ಅಸಿಂಧುತ್ವದ ಬ್ರಾಂಡ್ ಸರಳವಾಗಿ ಕಾಣುವಲ್ಲಿಯೂ ಸಹ ಇದು ಅದರಷ್ಟೇ ಸತ್ಯವಾಗಿರಬೇಕು:ಏಕೆಂದರೆ, ಅಲ್ಲಿಯೂ ಸಹ ನ್ಯಾಯಾಲಯದ ತೀರ್ಮಾನವನ್ನು ಪಡೆಯುವ ಮೂಲಕ ಮಾತ್ರ ಕಾನೂನಿನಲ್ಲಿ ಆ ಆದೇಶವನ್ನು ಪರಿಣಾಮಕಾರಿಯಾಗಿ ವಿರೋಧಿಸಬಹುದು.

ನ್ಯಾಯಾಲಯವನ್ನು ಅವಲಂಬಿಸುವ ಅಗತ್ಯತೆಯನ್ನು ಸ್ಪಷ್ಟ ದೋಷ ಮತ್ತು ಅವ್ಯಕ್ತ ದೋಷಗಳ (ಇಡಿ. ವೇಡ್ ಅಂಡ್ ಫೋರ್ಸೈತ್ ಇನ್ ಅಡ್ಮಿನಿಸ್ಟ್ರೇಟಿವ್ ಲಾ, 7 ನೇ ಎಡಿಷನ್ 1994. "ನಡುವೆ ಭೇದ ಮಾಡದೆ ಹೌಸ್ ಆಫ್ ಲಾರ್ಡ್ಸ್ ಹಾಗೂ ಪಿವಿ ಕೌನ್ಸಿಲ್ನಲ್ಲಿ ಪುನರಾವರ್ತಿತವಾಗಿ (ಎಸ್‌ಐಸಿ) ತೋರಿಸಲಾಗಿದೆ.

10. ಮಣೆ ಮುನಿಸಿಪಲ್ ಕಾರ್ಪೊರೇಷನ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ (2007) 5 ಎಸ್ಸಿಸಿ 211 ಮೊಕದ್ದಮೆಯಲ್ಲಿ, ಈ ನ್ಯಾಯಾಲಯವು ಕಾಲಪರಿಮಿತಿ ಅವಧಿಯನ್ನು ಮೀರಿ, ಆದೇಶಗಳ ಘೋಷಣೆಗೆ ಸಂಬಂಧಿಸಿದ ಈ ಮು ಂ ದಿನ ಅಭಿಪ್ರಾಯೋಕ್ತಿಗಳನ್ನು ಅಸಿಂಧುವೆಂದು ಪುನರುಚ್ಚರಿಸಿದೆ:

"39. ಎಲ್ಲಾ ನ್ಯಾಯಾಲಯಗಳು ಹೊರಡಿಸಿದ ಡಿಗ್ರಿಗಳನ್ನು ಬದಿಗಿರಿಸಿ ಮತ್ತು ಹಲವಾರು ಮೊಕದ್ದಮೆಗಳನ್ನು ಉಲ್ಲೇಖಿಸಿ, ಈ ನ್ಯಾಯಾಲಯವು, ಆದೇಶದ ಅಸಿಂಧುತ್ವದಿಂದ ಬಾಧಿತನಾದ ಪಕ್ಷಕಾರನು, ತನ್ನ ವಿರುದ್ಧದ ಆದೇಶವು ಅಪವರ್ತನೀಯವಾಗಿತ್ತೆಂದು ಘೋಷಿಸುವುದಕ್ಕಾಗಿ ನ್ಯಾಯಾಲಯದ ಮೊರೆ ಹೋಗಲು ಉದ್ದೇಶಿಸಿದಲ್ಲಿ, ಅವನು ಕಾಲಪರಿಮಿತಿಯಿಂದ ನಿಗದಿಪಡಿಸಲಾದ ಅವಧಿಯೊಳಗೆ ನ್ಯಾಯಾಲಯದ ಮುಂದೆ ಬರಬೇಕು ಎಂದು ತೀರ್ಮಾನಿಸಿದೆ.ಪರಿಮಿತಿಯ ಶಾಸನಬದ್ಧ ಸಮಯವು ಮುಕ್ತಾಯವಾದಲ್ಲಿ, ಕೋರಲಾದ ಘೋಷಣೆಯನ್ನು ನ್ಯಾಯಾಲಯವು ನೀಡುವುದಿಲ್ಲ "

(ಒತ್ತು ನೀಡಲಾಗಿದೆ)

11. ನಾವು, ಈ ಮೇಲೆ ಹೇಳಲಾದ ಅಭಿಪ್ರಾಯೋಕ್ತಿಗಳನ್ನು ಗೌರವಯುತವಾಗಿ ಸ್ವೀಕರಿಸಿದ್ದೇವೆ.ಆದಾಗ್ಯೂ, ಕಾಲಪರಿಮಿತಿಯನ್ನು ನಿಗದಿಪಡಿಸಿರದಿದ್ದಲ್ಲಿ, ಪಕ್ಷಕಾರನು ಯುಕ್ತ ಸಮಯದೊಳಗೆ ಸಕ್ಷಮ ನ್ಯಾಯಾಲಯದ ಅಥವಾ ಪ್ರಾಧಿಕಾರದ ಮೊರೆ ಹೋಗಬೇಕು. ಇಲ್ಲವಾದರೆ, ಯಾವುದೇ ಪರಿಹಾರವನ್ನು ನೀಡಲಾಗದು ಎಂದು ಸೇರಿಸುವ ಅಗತ್ಯವಿದೆ.ಈ ಹಿಂದೆ ನಿರ್ಧರಿಸಲಾದಂತೆ, ಈ ನಿಯಮವು ಸ್ವ-ಪ್ರೇರಣೆಯ ಕ್ರಮಗಳಿಗೂ ಸಹ ಅನ್ವಯಿಸುತ್ತದೆ.(ಅಡಿಗೆರೆ ಹಾಕಲಾಗಿದೆ)

19. ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನನ್ನು ಅನ್ವಯಿಸಿ, 1966 ಮತ್ತು 1972 ರ ವರ್ಷದಲ್ಲಿ ಮೂಲ ಅನುದಾನಿತನಿಂದಾದ ಪರಭಾರೆಗಳನ್ನು 1 ನೇ ಜನವರಿ 1979 ರಂದು ಪಿಟಿಸಿಎಲ್ ಅಧಿನಿಯಮವು ಜಾರಿಗೆ ಬಂದಾಗ, 50 ವರ್ಷಗಳಿಗಿಂತ ಹೆಚ್ಚಿನ ಮತ್ತು 35 ವರ್ಷಗಳ ಅವಧಿಯ ನಂತರ 2015 ರ ವರ್ಷದಲ್ಲಿ ರದ್ದುಪಡಿಸಲು ಕೋರಲಾಯಿತು.

20. ಸದ್ಯದ ಮೊಕದ್ದಮೆಯ ಸಂಗತಿಗಳಿಗೆ, ಈ ಮೇಲೆ ಹೇಳಲಾದ ಕಾನೂನು ಸ್ಥಿತಿಯನ್ನು ಅನ್ವಯಿಸಿ, 2015 ರ ವರ್ಷದಲ್ಲಿ ಆರನೇ ಎದುರುದಾರನೊಂದಿಗೆ ಅಪೀಲುದಾರನು ಕೈಗೊಂಡ ವ್ಯವಹರಣೆಗಳು ದೀರ್ಘ, ಅಸಮಂಜಸ ಮತ್ತು ಮಿತಿಮೀರಿದ ವಿಳಂಬ ಹಾಗೂ ಸಮಯ ಮೀರಿದ್ದರಿಂದಾಗಿ ಮತ್ತು ಅದನ್ನು ಪಿಟಿಸಿಎಲ್ ಅಧಿನಿಯಮವು ಜಾರಿಗೆ ಬಂದ ಮೇಲೆ ಮೂವತ್ತು ವರ್ಷಗಳ ಅಸಮಂಜಸವಾದ ದೀರ್ಘ ಅವಧಿಯ ನಂತರ ಮತ್ತು ಪರಭಾರೆ ದಿನಾಂಕದಿಂದ ಸುಮಾರು ಐವತ್ತು ವರ್ಷಗಳ ನಂತರ ಕೈಗೊಳ್ಳಲಾಯಿತು ಎಂಬ ಕಾರಣದಿಂದ ಸಮರ್ಥನೀಯವಾಗಿಲ್ಲ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.

21. ಈ ಸನ್ನಿವೇಶಗಳ ಅಡಿಯಲ್ಲಿ ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯವು ವಿಧಿಸಿದ, ಈ ಮೇಲೆ ಹೇಳಲಾದ ಕಾನೂನನ್ನು ಚ ಅನ್ವಯಿಸಿರುವುದು ಮತ್ತು ರಿಟ್ ಅರ್ಜಿಯನ್ನು ವಜಾ ಮಾಡಿರುವುದು ಸಂಪೂರ್ಣವಾಗಿ ಸಮರ್ಥಿತವಾಗಿದೆ.ಹಾಗಾಗಿ, ಈ ಅಪೀಲಿನಲ್ಲಿ ಯಾವುದೇ ಗುಣಾರ್ಹತೆಯಿಲ್ಲ ಎಂಬುದು ನಮ್ಮ ಅಭಿಪ್ರಾಯವಾಗಿದ್ದು, ಅದನ್ನು ಈ ಮೂಲಕ ವಜಾ ಮಾಡಲಾಗಿದೆ.